## ಕೈಸರೈಯಲ್ಲಿ ಬಂಧನ



**ಸಬ್ಬತ್ತಿನ ಮಧ್ಯಾಹ್ನ:**

**ಈ ವಾರದ ಪಾಠದ ಅಧ್ಯಯನಕ್ಕಾಗಿ:** ಅ.ಪೋ.ಕೃ 24, ಅ.ಪೋ.ಕೃ 25, ಅ.ಪೋ.ಕೃ 26, 1 ಕೊರಿಂಥ 1:23.

**ಸ್ಮರಣ ವಾಕ್ಯ: "ಅಲ್ಪ ಪ್ರಯತ್ನದಿಂದಾಗಲಿ ಅಧಿಕ ಪ್ರಯತ್ನದಿಂದಾಗಲಿ ನೀನು ಮಾತ್ರವಲ್ಲದೆ ಈ ಹೊತ್ತು ನನ್ನ ಮಾತುಗಳನ್ನು ಕೇಳುವವರೆಲ್ಲರೂ ಈ ಬೇಡಿಗಳ ಹೊರತು ನನ್ನಂತೆ ಆಗಬೇಕೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಅಂದನು." (ಅ.ಪೋ.ಕೃ 26:29).**

ಪೌಲನನ್ನು ಕೈಸರೈಗೆ ವರ್ಗಾವಣೆಯ ಕಾಲವಾಧಿಯು ಎರಡು ವರ್ಷಗಳು ಅವನು ಅಲ್ಲಿ ಇರುವಂತೆ ಮಾಡಿತು. *(ಅ. ಪೋ.ಕೃ 24:27)*, ಅದರಲ್ಲೂ ಮುಖ್ಯವಾಗಿ ಹೆರೋದನ ರಾಜ್ಯಪಾಲನ ಅಧಿಕೃತ ನಿವಾಸದಲ್ಲಿ ಇರಿಸಲಾಯಿತು.*(ಅ. ಪೋ.ಕೃ 24:35).* ಆ ವರ್ಷಗಳಲ್ಲಿ ಅವನ ಮೇಲೆ ಅನೇಕ ವಿಚಾರಣೆಗಳನ್ನು ನಡೆಸಲಾಯಿತು ಇದರ ಭಾಗವಾಗಿ ಅವನು ರೋಮ್ ಸಾಮ್ರಾಜ್ಯದ ಇಬ್ಬರು ರಾಜ್ಯಪಾಲರ ಮುಂದೆ ಹಾಜರಾಗಬೇಕಾಯಿತು. *(ಫೆಲಿಕ್ಸ್ ಮತ್ತು ಫೆಸ್ತನು)* ಮತ್ತು ರಾಜನಾದ ಆಗ್ರಿಪ್ಪ II, ಇವರ ಮುಂದೆ ಹಾಜರಾಗಿ ದೇವರು ಆತನಿಗೆ ಒಪ್ಪಿಸಿದ ಸೇವೆಯನ್ನು ಪೂರ್ಣಗೊಳಿಸಿದನು *(ಅ.ಪೋ.ಕೃ 9:15).*

ಈ ಎಲ್ಲಾ ವಿಚಾರಣೆಗಳಲ್ಲಿ ಪೌಲನು ತನ್ನ ನಿರ್ದೋಷತ್ವವನ್ನು ಬಲವಾಗಿ ಸಮರ್ಥಿಸಿಕೊಂಡನು, ಅವನ ವಿರುದ್ಧವಾಗಿ ಯಾವುದೇ ಸಾಕ್ಷಾಧಾರಗಳು ಇಲ್ಲವೆಂದು ಅವನ ವಿರುದ್ಧವಾಗಿ ಸಾಕ್ಷಿ ಹೇಳಲು ಬಂದವರು ಅದನ್ನು ರುಜುಗೊಳಿಸಿದರು. ಈ ಇಡೀ ವಿವರಣೆಯ ಉದ್ದೇಶ ಪೌಲನು ಯಾವುದೇ ತಪ್ಪನ್ನು ಮಾಡಿಲ್ಲ ಮತ್ತು ಆತನನ್ನು ಬಂಧಿಸುವುದಕ್ಕೆ ಯಾವುದೇ ಕಾರಣಗಳು ಇಲ್ಲವೆಂದು ಬಲವಾಗಿ ನಿರೂಪಿಸುವುದಾಗಿದೆ ಮತ್ತು ಅವನು ಕೈಸರನ ಮುಂದೆ ಮನವಿಗೆ ಕೋರಿಕೆಯನ್ನು ಸಲ್ಲಿಸಿದೆ ಇದ್ದರೆ ಅವನನ್ನು ಬಿಡುಗಡೆಮಾಡುವ ಎಲ್ಲಾ ಅವಕಾಶಗಳು ಇದ್ದವು *(ಅ. ಪೋ. ಕೃ 26:32).* ಈ ವಿಚಾರಣೆಗಳು ಯೇಸುವಿನ ಮತ್ತು ಆತನ ಪುನರುತ್ಥಾನದ ಕುರಿತಾಗಿ ಸಾಕ್ಷಿಯನ್ನು ಹೇಳಲು ಎಲ್ಲಾ ಅವಕಾಶಗಳನ್ನು ನೀಡಿದವು.

ಆದರೂ, ಈ ವರ್ಷಗಳು ಬಲವಾದ ಆತಂಕದ ದಿನಗಳು ಮತ್ತು ಕಠಿಣ ಬಂಧನದ ದಿನಗಳಲ್ಲಿ ಪೌಲನಿಗೆ ಯೆರುಷಲೆಮಿನ ಸಭೆಯಿಂದ ಯಾವುದೇ ವಿಧವಾದ ಸಹಾಯವು ಕೂಡ ಸಿಗಲಿಲ್ಲ. "ಇದಕ್ಕೂ ಮಿಗಿಲಾಗಿ ಪೌಲನು ಮಾಡಿರುವ ಕಾರ್ಯಗಳಿಗೆ ಸರಿಯಾದ ಶಿಕ್ಷೆಯನ್ನು ಅನುಭವಿಸುತ್ತಿದ್ದಾನೆ ಎಂದು ಅಲ್ಲಿನ ನಾಯಕರು ಭಾವಿಸಿದ್ದರು."ಎಲೆನ್ ಜಿ ವೈಟ್, ದಿ ಅಕ್ಟ್ಸ್ ಆಫ್ ಅಪೋಸ್ಟ್ಲಸ್ . ಪುಟ 403.

**ಭಾನುವಾರ** ಸೆಪ್ಟೆಂಬರ್ 16

## ಫೆಲಿಕ್ಸ್ ನ ಮುಂದೆ

ಪೌಲನು ಕೈಸರೈಗೆ ಬಂದ ಕೆಲವೇ ದಿನಗಳಲ್ಲಿ ಯೆಹೂದ್ಯ ಸಮುದಾಯದ ಮುಖ್ಯವಾದ ಕೆಲವು ನಾಯಕರು ಮಹಾ ಯಾಜಕನು, ಸಭೆ ಹಿರಿಯರಲ್ಲಿ ಕೆಲವು ಸದಸ್ಯರು ಹಾಗೂ ತೆರ್ತುಲನೆಂಬ ಒಬ್ಬ ವಕೀಲನನ್ನು ಕರೆದುಕೊಂಡು ಬಂದು ಪೌಲನ ಮೇಲೆ ದೇಶಾಧಿಪತಿಗೆ ಪಿರಿಯಾದಿ ಹೇಳಿದರು *(ಅ. ಪೋ. ಕೃ 24:1-9).*

ಈ ಒಂದು ವಿಚಾರಣೆಯಲ್ಲಿ ಮಾತ್ರ ಪೌಲನ ವಿರುದ್ಧವಾಗಿ ಅವನ ವಿರೋಧಿಗಳು ವಕೀಲರನ್ನು ನೇಮಿಸಿಕೊಂಡರು. ತೆರ್ತುಲನು ತನ್ನ ವಾದದಲ್ಲಿ ರಾಜ್ಯಪಾಲನ ಗಮನವನ್ನು ಸೆಳೆಯಲು ಬಹಳ ಆಸಕ್ತಿಕರವಾದ ವಿಧಾನವನ್ನು ಅನುಸರಿಸಿದನು. ಫೆಲಿಕ್ಸ್ ನ ಆಡಳಿತದಲ್ಲಿ ಯೆಹೂದ್ಯರು ಶಾಂತಿಯನ್ನು ಅನುಭವಿಸಿದರು ಎಂಬ ವಾದವು ಸತ್ಯಕ್ಕೆ ದೂರವಾಗಿತ್ತು. ಅದಕ್ಕೆ ವಿರುದ್ಧ ಫೆಲಿಕ್ಸ್ ನ ಅಧಿಕಾರದಲ್ಲಿ ಯೆಹೂದ್ಯರು ಹೆಚ್ಚಿನ ಹಿಂಸೆಯನ್ನು ಮತ್ತು ಕಷ್ಟವನ್ನು ಅನುಭವಿಸಿದರು. ಇದಲ್ಲದೆ ಫೆಲಿಕ್ಸ್ ನು ತನ್ನ ಎಲ್ಲಾ ಅಧಿಕಾರವನ್ನು ಉಪಯೋಗಿಸಿ ಯೆಹೂದ್ಯರ ಮೇಲೆ ಹೆಚ್ಚಿನ ದಬ್ಬಾಳಿಕೆಯನ್ನು ನಡೆಸಿದನು.

ನಂತರ, ತೆರ್ತುಲನು ಪೌಲನ ವಿರುದ್ದವಾಗಿ ಮೂರು ಮುಖ್ಯವಾದ ಆರೋಪಗಳನ್ನು ಮಾಡಿದನು. (1) ಪೌಲನು ಪೀಡೆಯಂತಿದ್ದು ಲೋಕದಲ್ಲಿ ಎಲ್ಲೆಲ್ಲಿಯೂ ಇರುವ ಎಲ್ಲಾ ಯೆಹೂದ್ಯರಲ್ಲಿ ದಂಗೆಯನ್ನು ಎಬ್ಬಿಸುತ್ತಿದ್ದಾನೆ. *(ಅ.ಪೋ.ಕೃ 24:5),* (2) ಪಾಷಂಡ (ವಿರೋಧ) ಮತದಲ್ಲಿ ಪ್ರಮುಖನೆಂದು ಇದರ ಅರ್ಥದಲ್ಲಿ ಇಡೀ ಕ್ರೈಸ್ತಿಯ ಮತವು ನಾಶನದ ಮತವೆಂದು *(ಅ.ಪೋ.ಕೃ 24:5)*, ಮತ್ತು (3) ಅವನು ಯೆರುಷಲೆಮಿನ ದೇವಾಲಯವನ್ನು ಹಾಳು ಮಾಡಲು ಪ್ರಯತ್ನಿಸಿದ್ದಾನೆ ಎಂದು ಆರೋಪಿಸಿದನು.

**ಅ.ಪೋ.ಕೃ 24:10-19 ನ್ನು ಓದಿರಿ, ಈ ಎಲ್ಲಾ ಆರೋಪಗಳಿಗೆ ಪೌಲನು ಯಾವ ರೀತಿಯ ಉತ್ತರವನ್ನು ಕೊಟ್ಟನು?**

____________________________________________

____________________________________________

ಪೌಲನು ಮಂಡಿಸಿದ ಎರಡು ವಾದಗಳು ಎದುರಾಳಿಯ ಆರೋಪಗಳನ್ನು ಹೊಡೆದುಹಾಕುವಂತೆ ಮಾಡಿತು. (1) ಏಷ್ಯಾ ಸೀಮೆಯ ಸಾಕ್ಷಿಗಳು ಇಲ್ಲದೆ ಇರುವುದು *(ಅ.ಪೋ.ಕೃ 24:18.19)*, ಮತ್ತು (2) ಒಂದು ವಾರದ ಮುಂದೆ ಹಿರಿಸಭೆಯ ಮುಂದೆ ಪೌಲನು ನಿಂತಿದ್ದಾಗ ಅವನ ವಿರುದ್ದವಾಗಿ ಯಾರು ಆರೋಪವನ್ನು ಮಾಡಲಿಲ್ಲ. (ಅ.ಪೋ.ಕೃ

24:20), ಹಾಗೂ ಪೌಲನು ಸತ್ತವರು ಪುನರುತ್ಥಾನ ಹೊಂದುವರು ಎಂದು ವಾದಿಸುತ್ತಾನೆ ಎಂಬುದನ್ನು ಬಿಟ್ಟು ಅವನ ತಪ್ಪು ಹೊರಿಸಲು ಯಾವುದೇ ಆಧಾರಗಳು ಇರಲಿಲ್ಲ. *(ಅ.ಪೋ.ಕೃ 23:6 ರ ಜೊತೆಗೆ ಹೋಲಿಸಿರಿ)*

ಫೆಲಿಕ್ಸ್ ನು ಬೇಗನೆ ಪೌಲನ ವಾದದಲ್ಲಿರುವ ಅಂಶಗಳನ್ನು ಗಮನಿಸಿದನು ಹಾಗೂ ಅವನಿಗೆ ಕ್ರೈಸ್ತಿಯ ಮತದ ಕುರಿತಾಗಿ ಸ್ವಲ್ಪ ಜ್ಞಾನವಿತ್ತು ಯಾಕೆಂದರೆ ಅವನ ಮಡದಿ ದ್ರುಸಿಲ್ಲ ಯೆಹೂದ್ಯಳಾಗಿದ್ದಳು. ಈ ಕಾರಣಕ್ಕಾಗಿ ಅವನು ಮುಂದಿನ ಆದೇಶದ ತನಕ ಪೌಲನ ವಿಚಾರಣೆಯನ್ನು ತಡೆಹಿಡಿದನು *(ಅ.ಪೋ.ಕೃ 24:22).*

ಫೆಲಿಕ್ಸ್ ನ ಉತ್ತರವು *(ಅ.ಪೋ.ಕೃ 24:24-27)* ಅವನ ಸ್ವಭಾವವನ್ನು ತೋರಿಸಿತು. ಅವನು ತೀರ್ಮಾನವನ್ನು ಮುಂದೂಡುವವನಾಗಿದ್ದನು. ಅವನಿಗೆ ಲಂಚ ನೀಡುವ ಅವಕಾಶವಿತ್ತು, ಮತ್ತು ಅವನು ಸಮಯ ಸಾಧಕನಾಗಿದ್ದನು. ಫೆಲಿಕ್ಸ್ ನಂತಹ ವ್ಯಕ್ತಿಯಿಂದ ಪೌಲನಿಗೆ ನ್ಯಾಯವಾದ ವಿಚಾರಣೆ ಮತ್ತು ತೀರ್ಪು ಸಿಗುವುದು ಬಹಳ ಕಷ್ಟವಾಗಿತ್ತು.

ಅ.ಪೋ.ಕೃ 24:16 ನ್ನು ಓದಿರಿ. ಪೌಲನು "ಯಾವಾಗಲೂ ದೇವರ ಮತ್ತು ಮನುಷ್ಯರ ಮನಸಾಕ್ಷಿಗೆ ವಿರುದ್ದವಾಗಿ ಪಾಪ ಮಾಡುವುದನ್ನು ವಿರೋಧಿಸಿದನು" ಇದರ ಅರ್ಥವೇನು ಇದನ್ನು ಬೇರೆ ವಿಧಾನದಲ್ಲಿ ಹೇಗೆ ಹೇಳಬಹುದು?

**ಸೋಮವಾರ** ಸೆಪ್ಟೆಂಬರ್ 17

## ಫೆಸ್ತನ ಮುಂದೆ

ಯೆಹೂದ್ಯರ ಮೆಚ್ಚುಗೆಯನ್ನು ಗಳಿಸಲು ಪೌಲನನ್ನು ಎರಡು ವರ್ಷಗಳ ತನಕ ಸೆರೆಯಲ್ಲಿಟ್ಟ ನಂತರ ಫೆಲಿಕ್ಸನ ಸ್ಥಾನದಲ್ಲಿ ಫೆಸ್ತನು ಯೂದಾಯದ ರಾಜ್ಯಪಾಲನಾಗಿ ನಿಯಮಿತಗೊಂಡನು (*ಅ. ಪೋ. ಕೃ 24:27).* ಫೆಸ್ತನು ಕ್ರಿ. ಶ. 60 ರಿಂದ 62 ತನಕ ಆಳ್ವಿಕೆ ನಡೆಸಿದನು.

**ಅ. ಪೋ. ಕೃ. 25:1-5 ರ ತನಕ ಓದಿರಿ. ಸತ್ಯವನ್ನು ನಂಬದೆ ಇರುವುವರು ಅದನ್ನು ಹೇಗೆ ವಿರೋಧಿಸುತ್ತಾರೆ ಎಂಬುದನ್ನು ನಾವು ಹೇಗೆ ಗಮನಿಸಬಹುದು?**

________________________________________________

________________________________________________

ಯಾಕೆಂದರೆ ಅವರು ಇದಕ್ಕೆ ಮುಂಚೆ ಫೆಲಿಕ್ಸ ಮುಂದೆ ಪೌಲನ ವಿರುದ್ದವಾಗಿ ತಮ್ಮ ವಾದವನ್ನು ಮಂಡಿಸುವುದರಲ್ಲಿ ಸೋಲನ್ನು ಅನುಭವಿಸಿದ್ದರಿಂದ, ನಾಯಕರು ಈ ಬಾರಿ ಅವಕಾಶವನ್ನು ಕಳೆದುಕೊಳ್ಳುವುದಕ್ಕೆ ಸಿದ್ದರಾಗಿರಲಿಲ್ಲ. ಫೆಸ್ತನು ಯೆರುಷಲೇಮಿಗೆ ನೀಡುವ ಮೊದಲ ಭೇಟಿಯಾಗಿದ್ದರಿಂದ ಅವರು ತಮಗೆ ಮಾಡುವ ಒಂದು ಸಹಾಯವಾಗಿ ನ್ಯಾಯ ವಿಚಾರಣೆಯ ಸ್ಥಳವನ್ನು ಮಾರ್ಪಡಿಸುವಂತೆ ಮನವಿ ಮಾಡಿದರು. ಅವರ ಮನವಿಯ ಪ್ರಕಾರ ಪೌಲನನ್ನು ಅವರ ಹಿರಿ ಸಭೆಯ ಅಧೀನಕ್ಕೆ ಒಳಪಡಿಸಿದರೆ ಅವರ ಯೆಹೂದ್ಯದ ಕಾನೂನಿನ ಪ್ರಕಾರ ವಿಚಾರಣೆ ನಡೆಸುವುದಾಗಿ ರಾಜ್ಯಪಾಲನ ಮುಂದೆ ಮನವಿಯನ್ನು ಸಲ್ಲಿಸಿದರು.

ಆದರೂ ಕೂಡ, ಈ ಮನವಿಯು ಅವರ ನಿಜವಾದ ಉದ್ದೇಶವನ್ನು ಮಾರೆಮಾಚುವಂತೆ ಕಾಣುತ್ತಿತ್ತು. ಫೆಸ್ತನು ಈ ವಿಚಾರಣೆಯನ್ನು ಮತ್ತೆ ಆರಂಭಿಸಲು ಬಯಸಿದ್ದರೂ ಕೂಡ, ವಿಚಾರಣೆಯು ಯೆರುಷಲೇಮಿನಲ್ಲಿ ನಡೆಯುವ

ಬದಲು ಕೈಸರೆಯಲ್ಲಿ ನಡೆಸಲಾಗುವುದು, ಇದರ ಅರ್ಥದಲ್ಲಿ ಪೌಲನು ರೋಮ್ ಸಾಮ್ರಾಜ್ಯದ ಕಾನೂನಿನ ಪ್ರಕಾರ ವಿಚಾರಣೆಗೆ ಒಳಗಾಗಬೇಕಾಯಿತು.

ಫೆಸ್ತನು ಕೈಸರೆಗೆ ಬಂದ ತಕ್ಷಣ, ಈ ವಿಚಾರಣೆಯನ್ನು ಆರಂಭಿಸಿದನು. ಪೌಲನ ವಿರೋಧಿಗಳು ಅವನ ವಿರುದ್ಧವಾಗಿ ಆರೋಪಗಳನ್ನು ಹೊರಿಸಲು ಆರಂಭಿಸಿದರು *(ಅ.ಪೋ.ಕೃ. 25:7),* ಈ ಬಾರಿ ಲೂಕನು ಆರೋಪಗಳನ್ನು ಮತ್ತೆ ದಾಖಲು ಮಾಡುವುದಿಲ್ಲ, ಬದಲಿಗೆ ಪೌಲನ ಉತ್ತರಗಳನ್ನು ಬರೆಯುತ್ತಾನೆ *(ಅ.ಪೋ.ಕೃ. 25:8),* ಈ ಆರೋಪಗಳು ಎರಡು ವರ್ಷಗಳ ಹಿಂದೆ ಮಾಡಿದ ಆರೋಪಗಳ ಹಾಗೆಯೇ ಇದ್ದವು. ಆದರೆ ಈ ಬಾರಿ ಧರ್ಮ ವಿರೋಧಿ ಎಂಬ ಆಪಾದನೆಗೆ ಬದಲಾಗಿ ಪೌಲನು ಸಾಮ್ರಾಜ್ಯದ ವಿರೋಧಿ ಎಂಬುದಾಗಿ ಬಿಂಬಿಸಿದರು.

**ಅ.ಪೋ.ಕೃ. 25:9-12 ನ್ನು ಓದಿರಿ. ಫೆಸ್ತನು ತನ್ನನ್ನು ರಾಜಕೀಯ ಲಾಭಕ್ಕಾಗಿ ಉಪಯೋಗಿಸಬಹುದು ಎಂಬುದನ್ನು ಗ್ರಹಿಸಿದ ಪೌಲನು ಏನು ಮಾಡಿದನು?**

________________________________________________________

________________________________________________________

ಕೊನೆಯಲ್ಲಿ ಫೆಸ್ತನು ಕೂಡ ಫೆಲಿಕ್ಸನ ಹಾಗೆ ರಾಜಕೀಯ ಲಾಭವನ್ನು ಹೊಂದುವುದಕ್ಕಾಗಿ ಬಯಸಿದ್ದನ್ನು ನಾವು ಗಮನಿಸಬಹುದು *(ಅ.ಪೋ.ಕೃ. 24:27),* ತನ್ನ ಅಧಿಕಾರಾವಧಿಯ ಪ್ರಾರಂಭದಲ್ಲಿ ಪೌಲನನ್ನು ನಿರಪರಾಧಿಯೆಂದು ಘೋಷಿಸುವುದರ ಮೂಲಕ ಯೆಹೂದ್ಯರ ಸಹಾಯವನ್ನು ಕಳೆದುಕೊಳ್ಳುವುದು ಅವನಿಗೆ ಇಷ್ಟವಿರಲಿಲ್ಲ. ಕೊನೆಯದಾಗಿ ಯೆಹೂದ್ಯರ ಮೂಲ ಮನವಿಯ ಪ್ರಕಾರ ಪೌಲನನ್ನು ಹಿರಿಸಭೆಯ ಪ್ರಕಾರ ವಿಚಾರಣೆ ನಡೆಸಲು ಅನುಮತಿ ನೀಡಿದನು.

ಇದು ಪೌಲನಿಗೆ ಇಷ್ಟವಿರಲಿಲ್ಲ. ಯಾಕೆಂದರೆ ಅಲ್ಲಿ ಸರಿಯಾದ ನ್ಯಾಯ ಸಿಗುವುದು ಅನುಮಾನವಾಗಿತ್ತು. ಆದ್ದರಿಂದ ತನ್ನ ರೋಮ್ ನಾಗರಿಕತೆಯ ಲಾಭವನ್ನು ಪಡೆದುಕೊಂಡು ತಾನು ರೋಮ್ ನ್ಯಾಯಸ್ಥಾನದ ಪ್ರಕಾರ ವಿಚಾರಣೆಗೆ ಒಳಪಡಲು ಬಯಸಿದನು. ಪೌಲನ ಈ ವಾದವನ್ನು ತಿರಸ್ಕರಿಸಲು ಸಾಧ್ಯವಾಗದೆ ಪೌಲನನ್ನು ಉನ್ನತ ನ್ಯಾಯ ವಿಚಾರಣೆಗೆ ಆದೇಶಿಸಿದನು, ಆ ಉನ್ನತ ನ್ಯಾಯ ವಿಚಾರಣೆ ಚಕ್ರವರ್ತಿಯ ಮುಂದೆಯೇ ನಡೆಯಬೇಕಾಗಿತ್ತು.

**ಮಂಗಳವಾರ** ಸೆಪ್ಟೆಂಬರ್ 18

## ಆಗ್ರಿಪ್ಪನ ಮುಂದೆ

ಫೆಸ್ತನು ತನ್ನನ್ನು ರೋಮ್ ಗೆ ಕಳುಹಿಸಿಕೊಡಬೇಕು ಎಂಬ ಮನವಿಯನ್ನು ಅಂಗಿಕರಿಸಿದನು *(ಅ.ಪೋ.ಕೃ. 25:12).* ಇದರ ಮಧ್ಯದಲ್ಲಿ ಚಕ್ರವರ್ತಿಯಾದ ಆಗ್ರಿಪ್ಪ II ತನ್ನ ಪ್ರಾಂತ್ಯವನ್ನು ಸಂದರ್ಶಿಸುವ ಅವಕಾಶವನ್ನು ಉಪಯೋಗಿಸಿಕೊಂಡು ಪೌಲನ ವಿಷಯವನ್ನು ಅವನ ಮುಂದೆ ಪ್ರಸ್ತಾವಿಸಿ ತಾನು ಪೌಲನ ಕುರಿತಾಗಿ ಕಳುಹಿಸುವ ಅಧಿಕಾರಿಯುತವಾದ ವರದಿಯ ವಿವರಣೆಯನ್ನು ಪಡೆಯಲು ಬಯಸಿದನು. ಯಾಕೆಂದರೆ ಫೆಸ್ತನಿಗೆ ಯೆಹೂದ್ಯರ

ವಿಚಾರದಲ್ಲಿ ಆಗ್ರಿಪ್ಪನಿಗೆ ಇರುವ ಅನುಭವವಿರಲಿಲ್ಲ. ಈ ವಿಷಯದಲ್ಲಿ ಆಗ್ರಿಪ್ಪನು ಅವನಿಗೆ ನಿಜವಾದ ಸಹಾಯವನ್ನು ನೀಡಿದನು *(ಅ.ಪೋ.ಕೃ. 26:2,3).*

**ಅ.ಪೋ ಕೃ 25:13-22. ನ್ನು ಓದಿರಿ. ಫೆಸ್ತನು ಪೌಲನ ಕುರಿತಾಗಿ ಆಗ್ರಿಪ್ಪನಿಗೆ ಏನು ಹೇಳಿದನು, ಮತ್ತು ಅದಕ್ಕೆ ರಾಜನು ಯಾವ ರೀತಿಯ ಪ್ರತಿಕ್ರಿಯೆಯನ್ನು ನೀಡಿದನು?**

______________________________________________________________

______________________________________________________________

ಆಗ್ರಿಪ್ಪ II ನು ಹೆರೋದ ವಂಶದ ಕೊನೆಯ ಆರಸನಾಗಿದ್ದು, ಚಕ್ರವರ್ತಿಯನ್ನು ವಂದಿಸಲು ಕೈಸರೆಗೆ ತನ್ನ ಸಹೋದರಿಯ ಜೊತೆಯಲ್ಲಿ ಬಂದನು.

ಪೌಲನ ಕುರಿತಾಗಿ ಹೇಳುವಾಗ ಫೆಸ್ತನು ಅಚ್ಚರಿಯಿಂದ ಪೌಲನು ಯಾವುದೇ ರೀತಿಯ ಗುರುತರವಾದ ಅಪರಾಧವನ್ನು ನಡೆಸಿಲ್ಲ ಎಂಬುದನ್ನು ಗಮನಿಸಿದನು, ಇದರಲ್ಲಿ ರಾಜಕೀಯ ಅಥವಾ ಅಪರಾಧಿ ಕಾರ್ಯಗಳನ್ನು ಮಾಡಿಲ್ಲ ಬದಲಿಗೆ ಅವನ ವಿರುದ್ದವಾದ ಅಪಾದನೆಗಳು ಯೆಹೂದ್ಯ ವಂಶದ ವಿರುದ್ದವಾಗಿದ್ದವು ಅದರಲ್ಲೂ ಕೂಡ ಯೇಸುವಿನ ಕುರಿತಾಗಿ "ಆತನು ಮರಣ ಹೊಂದಿದ್ದಾನೆ, ಆದರೆ ಪೌಲನು ಆತನು ಬದುಕಿದ್ದಾನೆ ಎಂದು ವಾದಿಸುತ್ತಾನೆ." *(ಅ.ಪೋ.ಕೃ. 25 :19).* ಪೌಲನು ಹಿರಿಸಭೆಯ ಮುಂದೆ ಯೇಸುವಿನ ಪುನರುತ್ಥಾನದ ವಿಚಾರವಾಗಿ ಹಾಜರಾಗಿದ್ದಾನೆ ಇದರ ಮೂಲಕ ಈ ವಿಚಾರಣೆಯ ಮುಖ್ಯ ವಿಚಾರವು ಯೇಸುವಿನ ಪುನರುತ್ಥಾನ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

**ಅ.ಪೋ.ಕೃ 25:23-27 ನ್ನು ಓದಿರಿ. ಪೌಲನು ಆಗ್ರಿಪ್ಪನ ಮುಂದೆ ಹಾಜರಾದ ವಿವರಣೆಯನ್ನು ಲೂಕನು ಹೇಗೆ ವಿವರಿಸುತ್ತಾನೆ?**

______________________________________________________________

______________________________________________________________

"ಪೌಲನು ಈಗ ನೆರೆದಿರುವ ಜನಸಮೂಹದ ಮುಂದೆ ನಿಂತಿದ್ದಾನೆ ಇಲ್ಲಿ ಎಂಥಹ ವೈರುಧ್ಯತೆಯನ್ನು ಚಿತ್ರಿಸಲಾಗಿದೆ. ಆಗ್ರಿಪ್ಪನು ಮತ್ತು ಅವನ ಸಹೋದರಿಯು ಅಧಿಕಾರದ ಆಸರೆಯಿಂದ ಸಿಂಹಾಸನದ ಮೇಲೆ ಕುಳಿತಿದ್ದಾರೆ ಮತ್ತು ಇಡೀ ಲೋಕವೇ ಅವರನ್ನು ಮೆಚ್ಚುತ್ತದೆ, ಆದರೆ ದೇವರ ಮುಂದೆ ನಿಲ್ಲಲು ಅವರಿಗೆ ಆರ್ಹತೆಯಿಲ್ಲ. ಅವರು ಆತನ ಆಜ್ಞೆಗಳನ್ನು ಮುರಿದಿದ್ದಾರೆ ಅವರ ಹೃದಯದಲ್ಲಿ ಮತ್ತು ಜೀವನದಲ್ಲಿ ದುಷ್ಟತನ ತುಂಬಿದೆ. ಅವರ ಕ್ರಿಯೆಗಳನ್ನು ಪರಲೋಕವು ಮೆಚ್ಚುವುದಿಲ್ಲ." **ಎಲೆನ್ ಜಿ ವೈಟ್, ದಿ ಅಕ್ಟ್ಸ್ ಆಫ್ ಅಪೋಸ್ಟಲ್ಸ್ . ಪುಟ 434.**

**ಮನುಷ್ಯರ ದೃಷ್ಟಿಗೆ ಒಳ್ಳೆಯದಾಗಿ ಕಾಣುವ ಬಾಹ್ಯ ಚಿತ್ರಣವು ಮತ್ತು ಅದರ ಹಿನ್ನಲೆಯು ಪರಲೋಕದ ದೇವರನ್ನು ಮೋಸಗೊಳಿಸಲು ಸಾಧ್ಯವಿಲ್ಲ ಎಂದು ಅರ್ಥಮಾಡಿಕೊಳ್ಳಲು ಹೇಗೆ ಸಹಾಯ ಮಾಡುತ್ತದೆ. ನಮ್ಮ ಕುರಿತಾಗಿ ಇದು ಎಷ್ಟು ಸಮಂಜಸವಾಗಿದೆ? ಈ ಹೊರಗಿನ ಚಿತ್ರಣವು ನಿಜವಾದ ವಾಸ್ತವಕ್ಕೆ ಹೇಗೆ ವಿರುದ್ದವಾಗಿದೆ?**

ಬುಧವಾರ

ಸೆಪ್ಟೆಂಬರ್ 19

## ಪೌಲನ ಸಮರ್ಥನೆ

ದೃಶ್ಯವು ಅದ್ಭುತವಾಗಿ ಸಿದ್ದವಾಗಿದೆ, ರಾಜರು ಮತ್ತು ಅಧಿಕಾರಿಗಳು ತಮ್ಮ ಸಿಂಹಾಸನದಲ್ಲಿ ಕುಳಿತಿರುವಾಗ ತನ್ನ ವಾದವನ್ನು ಸಮರ್ಥಿಸಿಕೊಳ್ಳಲು ಖೈದಿಯನ್ನು ತರಲಾಯಿತು. ಮುಖ್ಯವಾಗಿ ಆಗ್ರಿಪ್ಪ ರಾಜನ ಮುಂದೆ ವಾದಿಸಲು ಆತನನ್ನು ಕರೆತರಲಾಯಿತು ಯಾಕೆಂದರೆ ಫೆಸ್ತನು ಈ ವಾದವನ್ನುಈಗಾಗಲೇ ಕೇಳಿದ್ದನು. *(ಅ.ಪೋ.ಕೃ. 25:8-11).*

**ಅ.ಪೋ.ಕೃ 26:1-23. ನ್ನು ಓದಿರಿ. ಆಗ್ರಿಪ್ಪನ ಮುಂದೆ ತನ್ನ ಭಾಷಣದಲ್ಲಿ ಪೌಲನು ಮಾಡಿದ ಕಾರ್ಯವೇನು?**

____________________________________________

____________________________________________

ಆಗ್ರಿಪ್ಪನ ಮುಂದೆ ಪೌಲನ ಭಾಷಣವು ತನ್ನ ಆತ್ಮಕಥೆಯನ್ನು ಹೇಳುವುದಾಗಿತ್ತು ತನ್ನ ಜೀವನವು ಯೇಸುವನ್ನು ಅಂಗಿಕರಿಸುವ ಮುನ್ನ ಮತ್ತು ನಂತರ ಹೇಗಿತ್ತು ಇದನ್ನು ಅ.ಪೋ.ಕೃ 22:1-21 ರಲ್ಲಿ ನಾವು ಓದಿದ್ದೇವೆ. ಇದನ್ನು ಯೆರುಷಲೆಮಿನ ಜನರ ಮುಂದೆ ಪೌಲನು ಹೇಳಿದ್ದನು.

ಅಪೋಸ್ತಲನು ಆಗ್ರಿಪ್ಪನ ಮೆಚ್ಚುಗೆಯನ್ನು ಗಳಿಸಲು ಮೊದಲು ಪ್ರಯತ್ನ ಮಾಡುತ್ತಾನೆ. ಇಂತಹ ದೊಡ್ಡ ವ್ಯಕ್ತಿಗಳ ಸಮ್ಮುಖದಲ್ಲಿ ತನ್ನ ವಾದವನ್ನು ಮಂಡಿಸಲು ರಾಜನು ಮಾಡಿಕೊಟ್ಟ ಅವಕಾಶಕ್ಕಾಗಿ ರಾಜನಿಗೆ ವಂದನೆಯನ್ನು ತಿಳಿಸುತ್ತಾನೆ. ಆಗ್ರಿಪ್ಪ ರಾಜನಿಗೆ ಯೆಹೂದ್ಯ ಧರ್ಮದ ಎಲ್ಲಾ ಆಚಾರ ವಿಚಾರಗಳ ಪರಿಚಯವಿತ್ತು. ಇದೇ ವಿಚಾರದಲ್ಲಿ ರೋಮ್ ರಾಜ್ಯಪಾಲನಾದ ಫೆಸ್ತನಿಗೆ ಆಗ್ರಿಪ್ಪನು ಹೆಚ್ಚಿನ ಸಹಾಯವನ್ನು ಒದಗಿಸಿ ಪೌಲನ ವಾದವನ್ನು ಕೇಳಿ ಅವನ ವಿರುದ್ದವಾಗಿ ಬಂದ ಅಪಾದನೆಗಳು ಸುಳ್ಳು ಎಂದು ತೀರ್ಮಾನ ಮಾಡಲು ನೆರವಾದನು. ಈ ಭಾಷಣವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಮೊದಲ ಭಾಗದಲ್ಲಿ (*ಅ.ಪೋ.ಕೃ 26:4-11*), ಇಲ್ಲಿ ಪೌಲನು ತನ್ನ ಮೂಲ ಫರಿಸಾಯನ ಭಕ್ತಿಯ ಕುರಿತಾಗಿ ಹೇಳುತ್ತಾನೆ ಇದರ ಕುರಿತಾಗಿ ಅವನ ಸಹಪಾಟಿಗಳಿಗೆ ಪರಿಚಯವಿತ್ತು. ಒಬ್ಬ ಫರಿಸಾಯನಾಗಿ ಸತ್ತವರ ಪುನರುತ್ಥಾನದಲ್ಲಿ ನಂಬಿಕೆ ಇಟ್ಟಿದ್ದನು ಯಾಕೆಂದರೆ ಅದು ಅವರ ನಂಬಿಕೆಯ ಮೂಲವಾಗಿತ್ತು. ಈ ಕಾರಣದಿಂದ ಫರಿಸಾಯರು ಅವನ ವಾದವನ್ನು ವಿರೋಧಿಸಲು ಸಾದ್ಯವಿರಲಿಲ್ಲ. ಯಾಕೆಂದರೆ ತತ್ವಜ್ಞಾನದ ವಿಚಾರದಲ್ಲಿ ಪೌಲನನ್ನು ವಿರೋಧಿಸಲು ಯಾವುದೇ ಕಾರಣವು ಇರಲಿಲ್ಲ. ಪೌಲನು ಅವರ ಪರಿಸ್ಥಿತಿಯನ್ನು ಬಹಳ ಬೇಗ ಅರ್ಥಮಾಡಿಕೊಂಡನು. ಯಾಕೆಂದರೆ ಈ ಹಿಂದೆ ಅವನು ಕೂಡ ಯೇಸುವು ಪುನರುತ್ಥಾನ ಹೊಂದಿದ್ದಾನೆ ಎಂದು ನಂಬುವವರನ್ನು ಹಿಂಸಿಸುವವನಾಗಿದ್ದನು.

ಎರಡನೇಯ ಭಾಗದಲ್ಲಿ *(ಅ.ಪೋ.ಕೃ 26:12-18)*, ಈ ಜ್ಞಾನವು ಅವನ ಆಲೋಚನೆಯ ವಿಧಾನವನ್ನು ಹೇಗೆ ಬದಲಾಯಿಸಿತು ಎಂಬುದನ್ನು ಮತ್ತು ಯೇಸುವಿನ ಜೊತೆಗೆ ದಮಸ್ಕದ ದಾರಿಯಲ್ಲಿ ತಾನು ಎದುರಿಸಿದ ಅನುಭವವನ್ನು ಮತ್ತು ಸುವಾರ್ತೆಯನ್ನು ತೆಗೆದುಕೊಂಡು ಹೋಗಬೇಕು ಎಂಬ ಕರೆಯುವಿಕೆಯನ್ನು ವಿವರಿಸುತ್ತಾನೆ.

ಕೊನೆಯದಾಗಿ, ಪೌಲನು ತಾನು ಹೊಂದಿದ ಅನುಭವವನ್ನು (*ಅ.ಪೋ.ಕೃ 26:19-23*), ನಿರಾಕರಿಸಲು ಯಾವುದೇ ಅವಕಾಶವಿಲ್ಲದೆ ಸುವಾರ್ತೆಯ ಕರೆಯನ್ನು ಸ್ವಿಕಾರ ಮಾಡುವುದನ್ನು ಹೇಳುತ್ತಾನೆ, ಈ ಒಂದು ಕಾರಣಕ್ಕಾಗಿಯೇ ಆತನು ಈಗ ಬಂಧನದಲ್ಲಿ ಇರುವುದಾಗಿ ವಿವರಿಸುತ್ತಾನೆ. ಅವನ ಬಂಧನಕ್ಕೆ ಯೆಹೂದ್ಯರ ಆಜ್ಞೆಗಳನ್ನು ಮೀರಿರುವುದು ಅಥವಾ ಯೆರುಷಲೇಮಿನ ದೇವಾಲಯವನ್ನು ಹಾಳುಮಾಡಿರುವುದು ಕಾರಣಗಳು ಮುಖ್ಯವಲ್ಲ ಬದಲಿಗೆ ತಾನು ಯೇಸುವಿನ ಮರಣ ಮತ್ತು ಪುನರುತ್ಥಾನದ ಕುರಿತಾಗಿ ಹೇಳುತ್ತಿರುವ ಸಾಕ್ಷಿಯ ನಿಮಿತ್ತ ಮತ್ತು ಈ ಸಾಕ್ಷಿಯು ಅನ್ಯರಿಗೆ ಸುವಾರ್ತೆಯ ರಕ್ಷಣೆಯಲ್ಲಿ ಸಮಾನವಾದ ಅವಕಾಶವನ್ನು ಕಲ್ಪಿಸುತ್ತದೆ, ಇದರ ಫಲವಾಗಿ ಪೌಲನು ಶಿಕ್ಷೆಯನ್ನು ಅನುಭವಿಸುತ್ತಿದ್ದಾನೆ.

**ಅ.ಪೋ.ಕೃ 26:18. ನ್ನಿ ಓದಿರಿ. ಈ ವಚನಗಳ ಪ್ರಕಾರ ಕ್ರಿಸ್ತನಲ್ಲಿ ರಕ್ಷಣೆಯನ್ನು ಹೊಂದಿದವರಿಗೆ ಏನು ಆಗುತ್ತದೆ?ಈ ವಾಸ್ತವತೆಯನ್ನು ನೀವು ಯಾವ ರೀತಿಯಲ್ಲಿ ಅನುಭವಿಸಿದ್ದಿರಿ?**

**ಗುರುವಾರ** ಸೆಪ್ಟೆಂಬರ್ 20

## ಪೌಲನು ನಾಯಕರ ಮುಂದೆ

ಪೌಲನು ಆಗ್ರಿಪ್ಪನ ಜೊತೆಯಲ್ಲಿ ಮಾತನಾಡುತ್ತಿದ್ದರೂ ಕೂಡ, ಫೆಸ್ತನು ಮೊದಲನೇಯದಾಗಿ ಪ್ರತಿಕ್ರಿಯಿಸಿದನು ಇದನ್ನು *(ಅ.ಪೋ.ಕೃ 26:19-24)* ರಲ್ಲಿ ನೋಡಬಹುದು. ಒಂದು ವೇಳೆ ಪೌಲನು ಆತ್ಮಕ್ಕೆ ಸಾವಿಲ್ಲ ಎಂದು ಹೇಳಿದ್ದರೆ ಫೆಸ್ತನಿಗೆ ಯಾವುದೇ ಅಭ್ಯಂತರವಿರುತ್ತಿರಲಿಲ್ಲ. ಯಾಕೆಂದರೆ ರೋಮ್-ಗ್ರೀಕ್ ಸಮುದಾಯಗಳು ಎರಡೂ ಕೂಡ ಈ ವಿಷಯದಲ್ಲಿ ಏಕಾಭಿಪ್ರಾಯವನ್ನು ಹೊಂದಿರಲಿಲ್ಲ. ಇದಕ್ಕಾಗಿಯೇ ಅವರು ಪುನರುತ್ಥಾನದ ಬದಲಿಗೆ ಆತ್ಮಕ್ಕೆ ಸಾವಿಲ್ಲ ಎಂದು ನಂಬಿದರು. ಇದೇ ಕಾರಣಕ್ಕಾಗಿಯೇ ಸುವಾರ್ತೆಯು ಅನ್ಯರಿಗೆ ಮೂರ್ಖತನ ಎಂದು ಪೌಲನು ಹೇಳುತ್ತಾನೆ. *(1 ಕೊರಿಂಥ 1:23),*

ಬಹಳ ಗೌರವಯುತವಾಗಿ ತನ್ನ ನಿಲುವನ್ನು ಮಂಡಿಸಿದ ಬಳಿಕ ಪೌಲನು ಆಗ್ರಿಪ್ಪನ ಕಡೆಗೆ ತಿರುಗಿದನು ಆಗ್ರಿಪ್ಪನು ಯೆಹೂದ್ಯರ ಸಿದ್ದಾಂತಗಳನ್ನು ಬಲ್ಲವನಾಗಿದ್ದನು ಮತ್ತು ಪೌಲನ ವಿವರಣೆಯು ಇಬ್ರಿಯ ಪ್ರವಾದಿಗಳ ಭೋಧನೆಗೆ ಸರಿಯಾಗಿತ್ತು *(ಅ.ಪೋ.ಕೃ 16:25,26).*

**ಅ.ಪೋ.ಕೃ 26:27,28 ನ್ನು ಓದಿರಿ ಪೌಲನು ಒತ್ತಿ ಒತ್ತಿ ಕೇಳುವ ಪ್ರಶ್ನೆಗೆ ಆಗ್ರಿಪ್ಪನು ಕೊಟ್ಟ ಉತ್ತರವೇನು?**

____________________________________________

____________________________________________

ಪೌಲನ ಪ್ರಶ್ನೆಯು ಆಗ್ರಿಪ್ಪನನ್ನು ಸಂಕಷ್ಟಕ್ಕೆ ನೂಕಿತು. ಯೆಹೂದ್ಯನಾಗಿ ಸತ್ಯವೇದದ ಭೋಧನೆಯನ್ನು ಅವನು ನಿರಾಕರಿಸಲು ಸಾಧ್ಯವಿರಲಿಲ್ಲ. ಮತ್ತೊಂದು ಕಡೆಯಲ್ಲಿ ಅವನು ದೃಢವಾದ ಉತ್ತರವನ್ನು ನೀಡಿದರೆ ಯೇಸುವನ್ನು ಮೆಸ್ಸಿಯ ಎಂದು ಅಂಗಿಕರಿಸದೆ ಬೇರೆ ದಾರಿಯೇ ಇರಲಿಲ್ಲ. ಅವನ ಪ್ರತಿಕ್ರಿಯೆಯು ಬಹಳ

ಚತುರವಾಗಿತ್ತು ಮತ್ತು ಬುದ್ಧಿವಂತಿಕೆಯಿಂದ ನೀಡಿದ ಉತ್ತರವಾಗಿತ್ತು. “ಅಲ್ಪ ಪ್ರಯತ್ನದಿಂದ ನನ್ನನ್ನು ಕ್ರೈಸ್ತನಾಗುವುದಕ್ಕೆ ಒಡಂಬಡಿಸುತ್ತಿಯಾ? (ಅ.ಪೋ.ಕೃ 26:28) ಇದನ್ನು ಮೂಲ ಭಾಷೆಯಲ್ಲಿ ಓದಿದರೆ ನನ್ನನ್ನು ಅಷ್ಟು ಸುಲಭವಾಗಿ ಕ್ರೈಸ್ತನಾಗಿ ಮಾರ್ಪಾಟು ಮಾಡುತ್ತಿರುವೆ ಯಾಕೆ? ಎಂಬ ಅರ್ಥವನ್ನು ನೀಡುತ್ತದೆ.

ಇದಕ್ಕೆ ಪೌಲನು ನೀಡುವ ಉತ್ತರವೂ ಅವನಿಗೆ ಸುವಾರ್ತೆಯ ಕುರಿತಾಗಿ ಇದ್ದ ಬದ್ಧತೆಯನ್ನು ತೋರಿಸುತ್ತದೆ. “ಅಲ್ಪ ಪ್ರಯತ್ನದಿಂದಾಗಲಿ ಅಧಿಕ ಪ್ರಯತ್ನದಿಂದಾಗಲಿ ನೀನು ಮಾತ್ರವಲ್ಲದೆ ಈ ಹೊತ್ತು ನನ್ನ ಮಾತುಗಳನ್ನು ಕೇಳುವವರೆಲ್ಲರೂ ಈ ಬೇಡಿಗಳ ಹೊರೆತು ನನ್ನಂತೆ ಆಗಬೇಕೆಂದು ದೇವರನ್ನು ಪ್ರಾರ್ಥಿಸುತ್ತೇನೆ ಅಂದನು” (ಅ.ಪೋ.ಕೃ 26:29) ತನ್ನ ಕೊನೆಯ ಭಾಷಣದಲ್ಲಿ ಅಪೋಸ್ತಲನು ತನ್ನನ್ನು ಬಿಡುಗಡೆಗೋಳಿಸಬೇಕೆಂದು ಬೇಡಿಕೊಳ್ಳುವುದಿಲ್ಲ ಬದಲಿಗೆ ಅವನ ಭಾಷಣವನ್ನು ಕೇಳುತ್ತಿರುವವರೆಲ್ಲರೂ ಕೂಡ ಅವನ ಹಾಗೆ ಸ್ವಾತಂತ್ರ್ಯವನ್ನು ಅನುಭವಿಸಬೇಕು ಎಂದು ಬಯಸಿದನು. ಅವನು ತನ್ನ ಸ್ವಂತ ಸುರಕ್ಷತೆಯ ಬಗ್ಗೆ ಎಂದಿಗೂ ಚಿಂತಿಸಲಿಲ್ಲ.

**ಅ.ಪೋ.ಕೃ 26:30-32 ನ್ನಿ ಓದಿರಿ ಪೌಲನ ನಿರ್ದೋಷಿತನವನ್ನು ಆಗ್ರಿಪ್ಪನು ಹೇಗೆ ಸಮರ್ಥಿಸುತ್ತಾನೆ?**

__________________________________________________

__________________________________________________

ಫೆಸ್ತನು ತನ್ನ ವರದಿಯನ್ನು ತುಂಬಲು ಮಾತ್ರ ಆಗ್ರಿಪ್ಪನ ಸಹಾಯವನ್ನು ಬೇಡಿದನು (ಅ.ಪೋ.ಕೃ 25:25-27) ಕೈಸರೆಗೆ ಹೋಗಬೇಕು ಎಂಬ ಪೌಲನ ಮನವಿಯನ್ನು ಈಗಾಗಲೆ ಅಂಗಿಕರಿಸಲಾಗಿತ್ತು (ಅ.ಪೋ.ಕೃ 25:12). ಖೈದಿಯು ಈಗಾಗಲೇ ರೋಮ್ ಅಧಿಕಾರದ ವ್ಯಾಪ್ತಿಯನ್ನು ದಾಟಿ ಹೋಗಿದ್ದನು.

**ಅ.ಪೋ.ಕೃ 26:24-28 ನ್ನು ಓದಿರಿ. ಪೌಲನು ಅಂತಿಮವಾಗಿ ಯಾವ ಮನವಿಯನ್ನು ಮಾಡಿದನು ಮತ್ತು ಈ ವಿಚಾರವು ನಂಬಿಕೆಯ ವಿಷಯದಲ್ಲಿ ನಾವು ಅಂತಿಮವಾಗಿ ಯಾವ ನಿರ್ಧಾರವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತದೆ?**

## ಶುಕ್ರವಾರ

ಸೆಪ್ಟೆಂಬರ್ 21

**ಹೆಚ್ಚಿನ ಚಿಂತನೆ :** “ಈ ಮಾತುಗಳು ಆಗ್ರಿಪ್ಪನಿಗೆ ತನ್ನ ಕುಟುಂಬದ ಚರಿತ್ರೆಯನ್ನು ಜ್ಞಾಪಕ ಮಾಡಿದವೋ ಅಥವಾ ಅವನ ಕಠಿಣವಾದ ಮನಸ್ಸನ್ನು ಬದಲಾಯಿಸಲು ಪೌಲನು ಮಾಡಿದ ಪ್ರಯತ್ನವನ್ನು ವ್ಯರ್ಥಗೊಳಿಸಿದವೋ? ಅವನು ತನ್ನ ಮುತ್ತಾತನಾದ ಹೆರೋದನ ಕುರಿತಾಗಿ ಆಲೋಚಿಸಿದನೋ ಅಥವಾ ಅಮಾಯಕರಾದ ಕೂಸುಗಳನ್ನು ಬೆತ್ಲೇಹೇಮಿನಲ್ಲಿ ಸಂಹಾರ ಮಾಡುವ ಆದೇಶವನ್ನು ಜ್ಞಾಪಕಮಾಡಿಕೊಂಡನೋ? ಅಥವಾ ಅವನ ಚಿಕ್ಕಪ್ಪನು ಸ್ನಾನಿಕನಾದ ಯೋಹಾನನನ್ನು ಸಂಹಾರ ಮಾಡಿದ ದೃಶ್ಯವು ಅವನ ಮುಂದೆ ಬಂದಿತೋ?ಅಥವಾ ಅವನ ತಂದೆ ಆಗ್ರಿಪ್ಪ I ಅಪೋಸ್ತಲನಾದ ಯಾಕೊಬನನ್ನು ಹತಸಾಕ್ಷಿ ಮಾಡಿದ ಘಟನೆ ಜ್ಞಾಪಕಕ್ಕೆ ತಂದಿತೋ? ಅಥವಾ ಮುಂದೆ ಬರುವ ಎಲ್ಲಾ ರಾಜರು ಕೂಡ ದೇವರ ಮಕ್ಕಳನ್ನು ಹಿಂಸಿಸಿ ಆತನ ಕೋಪಕ್ಕೆ

ಗುರಿಯಾಗುವುದನ್ನು ಗ್ರಹಿಸಿದನೋ? ಅಥವಾ ಆ ದೃಶ್ಯವು ತನ್ನ ತಂದೆಯಾದ ಆಗ್ರಿಪ್ಪನ ದರ್ಪ ಮತ್ತು ಅಧಿಕಾರದ ಉತ್ತುಂಗಕ್ಕೆ ಏರುವಂತೆ ಮಾಡಿ ಜನರು ಅವನನ್ನು ದೇವರು ಎಂದು ಹೊಗಳಿದ ದೃಶ್ಯವನ್ನು ಜ್ಞಾಪಕಕ್ಕೆ ತಂದಿತೋ? ಅಥವಾ ಆ ಹೊಗಳಿಕೆಯು ಅಳಿಯುವ ಮುನ್ನವೇ ಅವನು ಯಾವ ರೀತಿಯಲ್ಲಿ ದೇವರ ಕೋಪಾಗ್ನಿಯನ್ನು ಎದುರಿಸಬೇಕಾಯಿತು. ಈ ಎಲ್ಲಾ ದೃಶ್ಯಗಳು ಕೂಡ ಆಗ್ರಿಪ್ಪನ ಕಣ್ಣುಗಳ ಮುಂದೆ ಬಂದು ಹೋಗಿರಬಹುದು. ಆದರೆ ಈ ಎಲ್ಲಾ ಒಳ್ಳೆಯ ಆಲೋಚನೆಗಳನ್ನು ಅವನ ದರ್ಪ ಮತ್ತು ಅಧಿಕಾರ ಅಳಿಸಿಹಾಕಿತು.”
**ಎಲೆನ್ ಜಿ ವೈಟ್, *ದಿ ಎಸ್ ಡಿ ಎ ಬೈಬಲ್ ಕಾಮೆಂಟರಿ ಸಂಪುಟ 6*, ಪುಟ 1066, 1067.**

**ಚರ್ಚಿಸಬೇಕಾದ ಪ್ರಶ್ನೆಗಳು**

1. **ನಿಮ್ಮ ತರಗತಿಯಲ್ಲಿ ಕೈಸರೈಯಲ್ಲಿ ವಿಚಾರಣೆ ನಡೆಸಬೇಕು ಎಂಬ ಪೌಲನ ಮನವಿಯನ್ನು ಚರ್ಚಿಸಿರಿ. ಈ ತೀರ್ಮಾನವು ಸರಿಯಾದ್ದದ್ದೆ?( ಇದನ್ನು ಅ.ಪೋ.ಕೃ 25:25; 26:31, 32 ರ ಜೊತೆಯಲ್ಲಿ ಹೋಲಿಸಿರಿ) ದೇವರ ಮೇಲೆ ಸಂಪೂರ್ಣವಾಗಿ ಅಧಾರವಾಗಿರದೆ ನಮ್ಮ ವಿವೇಚನೆಯ ಅನುಸಾರವಾಗಿ ತೀರ್ಮಾನವನ್ನು ತೆಗೆದುಕೊಳ್ಳುವುದು ಎಷ್ಟು ಸರಿಯಾಗಿದೆ?**
2. **ಪೌಲನು ಆಗ್ರಿಪ್ಪನಿಗೆ ಹೇಳಿದ ಮಾತನ್ನು ಗಮನಿಸಿರಿ “ಆದ್ದರಿಂದ ಅರಸನಾದ ಆಗ್ರಿಪ್ಪನೆ ನಾನು ಪರಲೋಕದ ದರ್ಶನಕ್ಕೆ ಅವಿಧೇಯನಾಗಲಿಲ್ಲ. (ಅ.ಪೋ.ಕೃ 26:19) ಇದು ಪೌಲನ ಕುರಿತಾಗಿ ಏನು ಹೇಳುತ್ತದೆ? ಕ್ರೈಸ್ತರಾಗಿ ದೇವರು ನಮಗೆ ನೀಡಿರುವ ಸುವಾರ್ತೆಯ ಕರೆಗೆ ನಾವು ಹೇಗೆ ಸ್ಪಂದಿಸುತ್ತೇವೆ?**
3. **ಪೌಲನು ಜನರಿಗಾಗಿ ತವಕ ಹೊಂದಿದ್ದನೆ ಹೊರೆತು ಅವರ ಸಂಖ್ಯೆಗಾಗಿ ಅಲ್ಲ, ಕೈಸರೆಯಲ್ಲಿ ತನ್ನ ಕೊನೆಯ ಭಾಷಣದಲ್ಲಿ ಎಲ್ಲಾ ಜನರು ತನ್ನ ಹಾಗೆ ಇರಬೇಕು ಅಂದರೆ ಅವರೆಲ್ಲರೂ ದೇವರ ಕೃಪೆಯನ್ನು ಹೊಂದಬೇಕು ಎಂದು ತನ್ನ ಹೃದಯದ ಬಯಕೆಯನ್ನು ಹೇಳಿದನು. (ಅ.ಪೋ.ಕೃ 26:19). ಅವನು ದೇವರ ಸುವಾರ್ತೆಗಿಂತ ತನ್ನ ಸ್ವಾತಂತ್ರ್ಯ ಮತ್ತು ಸುರಕ್ಷತೆಯನ್ನು ಬಯಸಲಿಲ್ಲ. ಈ ಅನುಭವದ ಮೂಲಕ ನಾವು ಏನು ಕಲಿಯಬಹುದು?ಸುವಾರ್ತೆಯನ್ನು ಸಾರುವುದಕ್ಕಾಗಿ ನಾವು ಯಾವ ರೀತಿಯ ತ್ಯಾಗವನ್ನು ಮಾಡಲು ಸಿದ್ಧರಿದ್ದೇವೆ?**
4. **ಪೌಲನ ಸ್ವಂತ ಬಾಯಿಂದ ಸುವಾರ್ತೆಯನ್ನು ಕೇಳುವ ಅವಕಾಶವನ್ನು ಆಗ್ರಿಪ್ಪನು ಹೊಂದಿದ್ದನು ಆದರೂ ಕೂಡ, ಅವನು ಅದನ್ನು ನಿರಾಕರಿಸಿದನು. ಇಂತಹ ಅದ್ಭುತವಾದ ಅವಕಾಶವನ್ನು ತಪ್ಪಿಸಿಕೊಳ್ಳದೆ ಇರಲು ನಾವು ಯಾವ ರೀತಿಯ ಎಚ್ಚರಿಕೆಯನ್ನು ವಹಿಸಬಹುದು? ನಮ್ಮ ಸುತ್ತಲೂ ಇರುವ ವಾಸ್ತವತೆಗಳ ನಡುವೆ ನಾವು ಯಾವ ರೀತಿಯಲ್ಲಿ ಅಧ್ಯಾತ್ಮಿಕವಾಗಿ ಎಚ್ಚರ ವಹಿಸಬಹುದು?**